3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No. 29/2021**

ಪ್ರಾಸಾ 13

ಚಾಸಾ 15

| | |
|---|---|
| ಹೆಸರು | ಚೇತನ್ ಶಿವು |
| ತಂದೆಯ ಹೆಸರು | ಪ್ರಸನ್ನ ಕುಮಾರ್ |
| ವಯಸ್ಸು | 31 ವರ್ಷ |
| ಉದ್ಯೋಗ | ದ್ವಿತೀಯ ದರ್ಜೆ ಸಹಾಯಕರು, ತಾಲ್ಲೂಕು ಕಚೇರಿ. |
| ವಾಸಸ್ಥಳ | ತುಮಕೂರು |

ಸಾಕ್ಷಿಯನ್ನು ದಿನಾಂಕ 12.11.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನಾನು 2019 ರಿಂದ ತುಮಕೂರಿನ ತಹಸೀಲ್ದಾರ್ ಕಚೇರಿಯಲ್ಲಿ ದ್ವಿ.ದ.ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2) ದಿನಾಂಕ 30.08.2020 ರಂದು ತುಮಕೂರು ನಗರ ಪೋಲೀಸ್ ಠಾಣೆಯಿಂದ ತಹಸೀಲ್ದಾರ್ ರವರಿಗೆ ಇಬ್ಬರು ಸರ್ಕಾರಿ ನೌಕರರನ್ನು ಸಾಕ್ಷಿಗಳಾಗಿ ನಿಯೋಜನೆ ಮಾಡಬೇಕೆಂದು ಮನವಿಯನ್ನು ಕಳುಹಿಸಿರುತ್ತಾರೆ. ಅದರಂತೆ ತಹಸೀಲ್ದಾರ್ ರವರು ನನಗೆ ಮತ್ತು ಚಾಸಾ.16 ರವರಿಗೆ ತುಮಕೂರು ನಗರ ಪೋಲೀಸ್ ಠಾಣೆಗೆ ಹೋಗಿ ವರದಿ ಮಾಡಿಕೊಳ್ಳುವಂತೆ ತಿಳಿಸಿರುತ್ತಾರೆ. ಅದೇ ದಿನ ನಾವು ಪೋಲೀಸ್ ಠಾಣೆಗೆ ಹೋಗಿ ವರದಿ ಮಾಡಿಕೊಂಡಿರುತ್ತೇವೆ. ಪೋಲೀಸ್ ಠಾಣೆಗೆ ಹೋದ ನಂತರ ವೃತ್ತ ನಿರೀಕ್ಷಕರಾದ ನವೀನ್ ರವರು ನನಗೆ ಒಂದು ಪತ್ರವನ್ನು ಕೊಟ್ಟಿರುತ್ತಾರೆ. ನಂತರ

ಪೊಲೀಸರು ರೇಪ್ ಮತ್ತು ಕೊಲೆ ಪ್ರಕರಣದಲ್ಲಿ ಸೀಜ್ ಮಾಡಿಕೊಂಡಿರುವ ವಸ್ತುಗಳನ್ನು ನಮಗೆ ತೋರಿಸುತ್ತೇವೆಂದು ಪೊಲೀಸರು ನಮಗೆ ಹೇಳಿರುತ್ತಾರೆ. ಆಗ ಪೊಲೀಸರು ಮತ್ತು ನಮ್ಮನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ವೃತ್ತ ನಿರೀಕ್ಷಕರ ಕಚೇರಿಯಲ್ಲಿದ್ದ ಟೇಬಲ್ ಮೇಲೆ ಇದ್ದ ಕಾರ್ ನ ಕೀ ಮತ್ತು ಹಣವನ್ನು ತೋರಿಸಿರುತ್ತಾರೆ. ನಂತರ ಅದೇ ಜಾಗದಲ್ಲಿ ಪಂಚನಾಮೆಯನ್ನು ಮಾಡಿಕೊಂಡು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಪೋಲೀಸ್ ಠಾಣೆಯ ಅವರಣದಲ್ಲಿದ್ದ ಒಂದು Indigo car ನ್ನು ತೋರಿಸಿರುತ್ತಾರೆ. ಪೋಲೀಸ್ ಠಾಣೆಯ ಒಳಗೆ ಐದು ಜನ ಆರೋಪಿತರು ಇದ್ದರು. ಆರೋಪಿತರು ಮೊಬೈಲ್ ನ ಸಿಮ್ ಗಳನ್ನು ನಾಶಪಡಿಸಿರುವ ಜಾಗವನ್ನು ತೋರಿಸುತ್ತೇವೆ ಎಂದು ಹೇಳಿದ್ದು, ನಂತರ ಪೋಲೀಸ್ ಠಾಣೆಯಿಂದ ಪೊಲೀಸ್ ಜೀಪ್ ನಲ್ಲಿ ತುಮಕೂರಿನ ಡಿ.ಎಂ.ಪಾಳ್ಯದಲ್ಲಿರುವ ಒಂದು ಜಾಗದಲ್ಲಿ ಆರೋಪಿತರು ಸಿಮ್ ನ್ನು ಸುಟ್ಟಿರುತ್ತೇವೆ ಎಂದು ತೋರಿಸಿರುತ್ತಾರೆ. ಅ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿಕೊಂಡು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ.

3) ನಂತರ ಸದರಿ ಸ್ಥಳದಿಂದ ತುಮಕೂರಿನ ಬೋವಿ ಪಾಳ್ಯದಲ್ಲಿರುವ ಒಂದು ಖಾಲಿ ಜಾಗಕ್ಕೆ ಹೋಗಿದ್ದು, ಆ ಜಾಗದಲ್ಲಿ ಆರೋಪಿತರು ಕೊಲೆ ಮಾಡಲು ಆ ಜಾಗದಲ್ಲಿ ಪ್ಲಾನ್ ಮಾಡಿರುತ್ತೇವೆಂದು ತಿಳಿಸಿರುತ್ತಾರೆ. ಆ ಜಾಗದಲ್ಲಿ ಪೊಲೀಸರು ಪಂಚನಾಮೆಯನ್ನು ಮಾಡಿಕೊಂಡು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಂತರ ಸದರಿ ಜಾಗದಿಂದ ಪೋಲೀಸ್ ಠಾಣೆಗೆ ಬಂದಿರುತ್ತೇವೆ.

4) ಈಗ ನನಗೆ ತೋರಿಸಿದ ಅಮಾನತ್ತು ಪಂಚನಾಮೆಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ.21 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.21(ಎ) ಮತ್ತು 21(ಬಿ) ಎಂದು ಗುರುತಿಸಲಾಯಿತು. ಪೋಲೀಸ್ ಠಾಣೆಯಲ್ಲಿ ನೋಡಿದ ಆರೋಪಿತರನ್ನು ಈಗ ನೋಡಿ ಗುರುತಿಸುತ್ತೀರಾ ಎಂದರೆ ಸಾಕ್ಷಿಯು ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಆಗ ಮಾಸ್ಕ್ ನ್ನು ಹಾಕಿದ್ದರು ಎಂದು ನುಡಿಯುತ್ತಾರೆ. ಪೋಲೀಸ್ ಠಾಣೆಯಲ್ಲಿ ತೋರಿಸಿದ ಕಾರಿನ ಕೀ ನ್ನು ನೋಡಿದರೆ

ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಕಾರಿನ ಕೀ ನ್ನು ಗುರುತಿಸುತ್ತೇನೆ. ಅದನ್ನು ಮು.ಮಾ.9 ಎಂದು ಗುರುತಿಸಲಾಯಿತು. ಪೋಲೀಸ್ ಠಾಣೆಯಲ್ಲಿ ತೋರಿಸಿದ ಹಣ ಎಷ್ಟು ಇತ್ತು ಎಂದು ಗೊತ್ತಿಲ್ಲ. ಅದನ್ನು ನೋಡಿದರೆ ಗುರುತಿಸುತ್ತೇನೆ.

5) ಈಗ ನನಗೆ ತೋರಿಸಿದ ಮತ್ತೊಂದು ದಾಖಲಾತಿಯಲ್ಲಿ ನನ್ನ ಸಹಿ ಇರುತ್ತದೆ. ಅದು ಮೊಬೈಲ್ ಸಿಮ್ ನಾಶಪಡಿಸಿದ ಸ್ಥಳದ ಪಂಚನಾಮೆ ಆಗಿದ್ದು ಅದನ್ನು ನಿಪಿ.22 ಎಂದು, ಸಾಕ್ಷಿಯ ಸಹಿಯನ್ನು ನಿಪಿ.22(ಎ) ಎಂದು ಗುರುತಿಸಲಾಯಿತು.

6) ಈಗ ನನಗೆ ತೋರಿಸಿದ ಮತ್ತೊಂದು ದಾಖಲಾತಿಯಲ್ಲಿ ನನ್ನ ಸಹಿ ಇರುತ್ತದೆ. ಅದು ಕೃತ್ಯಕ್ಕೆ ಸಂಚು ರೂಪಿಸಿದ ಸ್ಥಳದ ಪಂಚನಾಮೆಯಾಗಿದ್ದು, ಅದನ್ನು ನಿಪಿ.23 ಎಂದು, ಸಾಕ್ಷಿಯ ಸಹಿಯನ್ನು ನಿಪಿ.23(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ಮಾಡಿರುವ ಪಂಚನಾಮೆಗಳಿಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

7) ನಾನು ಮತ್ತು ಚಾಸಾ.16 ರವರು ಪೋಲೀಸ್ ಠಾಣೆಗೆ ಹೋದಾಗ ಆರೋಪಿತರನ್ನು ಪೊಲೀಸರ ವಶದಲ್ಲಿ ಇಟ್ಟುಕೊಂಡಿದ್ದರು ಎಂದರೆ ಸರಿ. ಆರೋಪಿತರ ಹೆಸರುಗಳನ್ನು ಪೊಲೀಸರು ನಮಗೆ ಹೇಳಿರುತ್ತಾರೆ ಎಂದರೆ ಸರಿ. ನಂತರ ಪೊಲೀಸರ ವಶದಲ್ಲಿದ್ದ

ಆರೋಪಿತರನ್ನು ನಮಗೆ ತೋರಿಸಿರುತ್ತಾರೆ ಎಂದರೆ ಸರಿ. ನಂತರ ಪೊಲೀಸರು ಆರೋಪಿತರು ತಮ್ಮ ಸ್ವಇಚ್ಛಾ ಹೇಳಿಕೆಗಳಲ್ಲಿ ಹೇಳಿದ ಅಂಶಗಳನ್ನು ನಮಗೆ ತಿಳಿಸಿ ಆರೋಪಿತರು ಸದರಿ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಾರೆ, ಅ ಸಮಯದಲ್ಲಿ ನಾವುಗಳು ಪಂಚರಾಗಿ ಹಾಜರಿರಬೇಕು ಎಂದು ನಮಗೆ ತಿಳಿಸಿರುತ್ತಾರೆ ಎಂದರೆ ಸರಿ. ಪೊಲೀಸ್ ಆವರಣದಲ್ಲಿದ್ದಂತಹ ಕಾರಿನ ಡಿಕ್ಕಿಯನ್ನು ತೆರೆದಾಗ ಅದರಲ್ಲಿ ಎರಡು ಕಬ್ಬಿಣದ ರಾಡ್ ಗಳು ಇದ್ದವು ಎಂದರೆ ಸರಿ. ಅವುಗಳನ್ನು ಆರೋಪಿತರು ದರೋಡೆ ಮಾಡಲು ಉಪಯೋಗಿಸುತ್ತಿದ್ದೆವು ಎಂದು ಹೇಳಿರುತ್ತಾರೆ ಎಂದರೆ ಸರಿ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಕಬ್ಬಿಣದ ರಾಡುಗಳನ್ನು ಹಾಜರುಪಡಿಸಿದ್ದು ಅವುಗಳ ಸೀಲುಗಳನ್ನು ತೆರೆಯಲು ಅನುಮತಿಯನ್ನು ನೀಡಲಾಯಿತು. ಸಾಕ್ಷಿಯು ಕಬ್ಬಿಣದ ರಾಡುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.10 ಮತ್ತು 11 ಎಂದು ಗುರುತಿಸಲಾಯಿತು.

8) ಈಗ ನನಗೆ ತೋರಿಸಿದ ಭಾವಚಿತ್ರಗಳಲ್ಲಿ ಕಾಣುವ ಕಾರನ್ನು ಗುರುತಿಸುತ್ತೇನೆ. ಸದರಿ ಭಾವಚಿತ್ರಗಳನ್ನು ನಿಪಿ.24 ರಿಂದ 27 ಎಂದು ಗುರುತಿಸಲಾಯಿತು. ಆರೋಪಿತರ ವಶದಿಂದ ಕೃತ್ಯಕ್ಕೆ ಉಪಂಯೋಗಿಸಿದ 7 ಮೊಬೈಲ್ ಫೋನುಗಳನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ.

9) 1 ನೇ ಆರೋಪಿಯಿಂದ ಒಂದು ಕಪ್ಪು ಬಣ್ಣದ Vivo company android mobile ಮತ್ತು Nokia key pad mobile ಗಳನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಅಲ್ಲದೇ 1 ನೇ ಆರೋಪಿಯಿಂದ ರೂ.550 ನಗದು ಹಣವನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಈಗ ನ್ಯಾಯಾಲಯದ ಮುಂದೆ ಸದರಿ ಮೊಬೈಲ್ ಗಳನ್ನು ಹಾಜರುಪಡಿಸಿದದ್ದು ಅವುಗಳ ಸೀಲನ್ನು ತೆರೆಯಲು ಅನುಮತಿಯನ್ನು ನೀಡಲಾಯಿತು. ಸದರಿ ಮೊಬೈಲ್ ಗಳನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ಮು.ಮಾ.12 ಮತ್ತು 13 ಎಂದು ಗುರುತಿಸಲಾಯಿತು.

10) ನಂತರ 2 ನೇ ಆರೋಪಿ ಕಡೆಯಿಂದ ಪೊಲೀಸರು Jio company ಯ ಕೀ ಪ್ಯಾಡ್ ಮೊಬೈಲ್ ವಶಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಮೊಬೈಲ್ ನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಅವುಗಳ ಸೀಲನ್ನು ತೆರೆಯಲು ಅನುಮತಿಯನ್ನು ನೀಡಲಾಯಿತು. ಸದರಿ ಮೊಬೈಲ್ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು.ಮಾ.14 ಎಂದು ಗುರುತಿಸಲಾಯಿತು.

11) 3 ನೇ ಆರೋಪಿ ಕಡೆಯಿಂದ ಪೊಲೀಸರು ಕಪ್ಪು ಮತ್ತು ನೀಲಿ ಬಣ್ಣದ Vivo company ಯ android ಮೊಬೈಲ್ ನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಮೊಬೈಲ್ ನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಅದರ ಸೀಲನ್ನು ತೆರೆಯಲು ಅನುಮತಿಯನ್ನು ನೀಡಲಾಯಿತು. ಸದರಿ ಮೊಬೈಲ್ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು.ಮಾ.15 ಎಂದು ಗುರುತಿಸಲಾಯಿತು.

12) 4 ನೇ ಆರೋಪಿ ಕಡೆಯಿಂದ ಪೊಲೀಸರು ಕಪ್ಪು ಬಣ್ಣದ Vivo company ಯ andoid mobile ಮತ್ತು carban company ಯ ಕೀ ಪ್ಯಾಡ್ ಮೊಬೈಲ್ ಗಳನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಮೊಬೈಲ್ ಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಅವುಗಳ ಸೀಲನ್ನು ತೆರೆಯಲು ಅನುಮತಿಯನ್ನು ನೀಡಲಾಯಿತು. ಸದರಿ ಮೊಬೈಲ್ ಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು.ಮಾ.16 ಮತ್ತು 17 ಎಂದು ಗುರುತಿಸಲಾಯಿತು. 4 ನೇ ಆರೋಪಿಯು ಮೃತೆ ಅಂಜಲಿರವರ ಮೊಬೈಲ್ ಎಂದು ಹಾಜರುಪಡಿಸಿದ್ದು ಅದನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಮೊಬೈಲ್ ನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಅದರ ಸೀಲನ್ನು ತೆರೆಯಲು ಅನುಮತಿಯನ್ನು ನೀಡಲಾಯಿತು. ಸದರಿ ಮೊಬೈಲ್ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು.ಮಾ.18 ಎಂದು ಗುರುತಿಸಲಾಯಿತು. ಸದರಿ ಮೊಬೈಲ್ ಗಳು, ಕಬ್ಬಿಣದ ರಾಡು, ನಗದು ಹಣ, ಕಾರು ಮತ್ತು ಕಾರಿನ ಕೀ ನ್ನು ವಶಕ್ಕೆ

ತೆಗೆದುಕೊಂಡು ನಮ್ಮ ಸಮಕ್ಷಮ ನಿಪಿ.21 ರಂತೆ ಅಮಾನತ್ತು ಪಂಚನಾಮೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ.

13) ಆರೋಪಿತರು ಡಿ.ಎಂ.ಪಾಳ್ಯ ಕಡೆಗೆ ಹೋಗುವ ತಿರುವಿನಲ್ಲಿ ರೈಸ್ ಮಿಲ್ ಗೋಡೆ ಪಕ್ಕದ ಚರಂಡಿಯ ಬಳಿ ಜಾಗವನ್ನು ತೋರಿಸಿ ಇದೇ ಸ್ಥಳದಲ್ಲಿ ಅಂಜಲಿಯ ಮೊಬೈಲ್ ನಲ್ಲಿದ್ದ ಎರಡು ಸಿಮ್ ಗಳನ್ನು ಮೊಬೈಲ್ ನಿಂದ ಬೇರ್ಪಡಿಸಿ ಚರಂಡಿಗೆ ಎಸೆದ ಜಾಗ ಎಂದು ತೋರಿಸಿದ್ದು ಆ ಸ್ಥಳದಲ್ಲಿ ನಿಪಿ.22 ರಂತೆ ಸ್ಥಳ ಪಂಚನಾಮೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ.

14) ನಂತರ ನಮ್ಮನ್ನು ಆರೋಪಿತರು ಯಲ್ಲಾಪುರದ ಬೋವಿಪಾಳ್ಯದ ಚೌಡೇಶ್ವರಿ ದೇವಸ್ಥಾನದ ಹಿಂಭಾಗ ಸತೀಶ್ ರವರ ಬಾಬ್ತು ಖಾಲಿ ಜಮೀನಿಗೆ ಕರೆದುಕೊಂಡು ಹೋಗಿ ಇದೇ ಜಾಗದಲ್ಲಿ ನಾವು ಸಂಚನ್ನು ರೂಪಿಸಿದ್ದೆವು ಎಂದು ತೋರಿಸಿದ್ದು ಆ ಜಾಗದಲ್ಲಿ ನಿಪಿ.23 ರಂತೆ ಪಂಚನಾಮೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ.

15) ಈಗ ನನಗೆ ತೋರಿಸಿದ ಭಾವಚಿತ್ರಗಳಲ್ಲಿ ನಾನು ಕಾಣುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.28 ರಿಂದ 36 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಕರೋನಾ ಕಾಯಿಲೆ ಇದ್ದಿದ್ದರಿಂದ ಆರೋಪಿತರು ಮತ್ತು ನಾವುಗಳು ಮಾಸ್ಕ್ ನ್ನು ಧರಿಸಿದ್ದೆವು. ಈಗ ನನಗೆತೋರಿಸಿದ ರೂ.550 ನ್ನು 1ನೇ ಆರೋಪಿ ಕಡೆಯಿಂದ ವಶಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ನಗದು ಹಣವನ್ನು ಒಟ್ಟಾಗಿ ಮು.ಮಾ.19 ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ 1, 2 ಮತ್ತು 5ನೇ ಆರೋಪಿತರ ಪರ ಶ್ರೀ.B.K.P.S. ವಕೀಲರಿಂದ :</u>**

16) ದಿನಾಂಕ 30.08.2020 ರಂದು ರಜೆ ಇದ್ದುದ್ದರಿಂದ ನಾನು ಕರ್ತವ್ಯಕ್ಕೆ ಹೋಗಿರುವುದಿಲ್ಲ. ತಹಸೀಲ್ದಾರ್ ರವರಿಂದ ಮನವಿ ಬಂದಾಗ ನಾನು ಮನೆಯ ಹತ್ತಿರ ಇದ್ದೆ. ನಮ್ಮ ಮನೆಗೂ ತಾಲ್ಲೂಕು ಕಚೇರಿಗೂ 5 ಕಿ.ಮೀ ದೂರ ಇರುತ್ತದೆ.

ತಹಸೀಲ್ದಾರ್ ರವರು ನನಗೆ ಮಧ್ಯಾಹ್ನ 1.30 ರಿಂದ 2 ಗಂಟೆ ಸಮಯಕ್ಕೆ ಕರೆ ಮಾಡಿ ಠಾಣೆಗೆ ಹೋಗುವಂತೆ ತಿಳಿಸಿರುತ್ತಾರೆ. ಆಗ ತಹಸೀಲ್ದಾರ್ ರವರು ಎಲ್ಲಿದ್ದರು ಎಂದು ನನಗೆ ಹೇಳಿರುವುದಿಲ್ಲ. ಠಾಣೆಯಿಂದ ಪಡೆದುಕೊಂಡಿರುವ ಮನವಿಯನ್ನು ನಾನು ನೋಡಿರುವುದಿಲ್ಲ. ಅಂದು ನನಗೆ ತಹಸೀಲ್ದಾರ್ ರವರು 9845352081 ನಂಬರ್ ನಿಂದ ಕರೆ ಮಾಡಿರುತ್ತಾರೆ. ತಹಸೀಲ್ದಾರ್ ರವರು ಲಿಖಿತ ಆದೇಶವನ್ನು ಮಾಡಿ ನನ್ನನ್ನು ನಿಯೋಜನೆ ಮಾಡಿರುವುದಿಲ್ಲ. ತಹಸೀಲ್ದಾರ್ ರವರು ಕರೆ ಮಾಡಿದ ನಂತರ ಮಧ್ಯಾಹ್ನ 2.15 ಗಂಟೆಗೆ ಪೋಲೀಸ್ ಠಾಣೆಗೆ ಹೋಗಿರುತ್ತೇವೆ. ನಾವು ವೃತ್ತ ನಿರೀಕ್ಷಕರಾದ ನವೀನ್ ರವರ ಮುಂದೆ ವರದಿ ಮಾಡಿರುತ್ತೇವೆ. ನಾವು ಮೌಖಿಕವಾಗಿ ತನಿಖಾಧಿಕಾರಿಯ ಮುಂದೆ ವರದಿ ಮಾಡಿಕೊಂಡಿರುತ್ತೇವೆ. ನಾನು ಠಾಣೆಗೆ ಹೋಗುವುದಕ್ಕಿಂತ ಮುಂಚೆ ಚಾಸಾ.16 ರವರು ಬಂದಿದ್ದರು. ನಾನು ಠಾಣೆಗೆ ಹೋಗುವುದಕ್ಕಿಂತ ಮುಂಚೆ ಕಾರಿನ ಕೀ ಮತ್ತು ನಗದು ಹಣ ಟೇಬಲ್ ಮೇಲೆ ಇತ್ತು.

17) Indigo ಮತ್ತು Swift ಕಾರುಗಳು ಬೇರೆ ಬೇರೆ ಎಂದರೆ ಸರಿ. ಮು.ಮ. 9 Indigo ಕಾರಿನ ಕೀ ಅಲ್ಲ ಎಂದರೆ ಸರಿ. ರೂ.50 ಮುಖಬೆಲೆಯ ನೋಟು ಬೇಬಲ್ ನ ಮೇಲೆ ಇರಲಿಲ್ಲ. ರೂ.50 ಮುಖಬೆಲೆಯ ನೋಟನ್ನು ನನಗೆ ತೋರಿಸಿರುವುದಿಲ್ಲ. ರೂ.500 ಮುಖಬೆಲೆಯ ನೋಟಿನ ನಂಬರ್ ನನಗೆ ನೆನಪಿಲ್ಲ. ರೂ.500 ಮುಖಬೆಲೆಯ ನೋಟೀನ ನಂಬರ್ ನ್ನು ಪೊಲೀಸರು ಬರೆದುಕೊಂಡಿರುವುದಿಲ್ಲ. ರೂ.20 ರ ಮುಖಬೆಲೆಯ ಎರಡು ನೋಟುಗಳು , ರೂ.10 ರ ಮುಖಬೆಲೆಯ ಒಂದು ನೋಟು ಎಂದು ಪಂಚನಾಮೆಯಲ್ಲಿ ಬರೆದುಕೊಂಡಿಲ್ಲ ಎಂದರೆ ಸರಿ. Oppo ಮತ್ತು Vivo company ಗಳು ಬೇರೆ ಬೇರೆ ಎಂದರೆ ಸರಿ.

18) ಪಂಚನಾಮೆಯಲ್ಲಿ 1 ನೇ ಆರೋಪಿಯ ಕಡೆಯಿಂದ ಕಪ್ಪು ಬಣ್ಣದ Oppo company ಯ ಮೊಬೈಲ್ ನ್ನು ವಶಪಡಿಸಿಕೊಂಡಿರುವುದಾಗಿ ಬರೆಯಲಾಗಿದೆ ಎಂದರೆ ಸರಿ. ಮು.ಮಾ.12 Vivo company ಯ ಮೊಬೈಲ್ ಅಲ್ಲ ಎಂದರೆ ಸರಿ.Oppo company ಯ ಮೊಬೈಲ್ ಯಾರಿಗೆ ಸೇರಿದ್ದೆಂದು ನನಗೆ ಗೊತ್ತಿಲ್ಲ.

Vivo company ಯ ಮೊಬೈಲ್ ನ ಐಎಂಇಐ ನಂಬರ್ ನನಗೆ ಗೊತ್ತಿಲ್ಲ. ಸದರಿ ಮೊಬೈಲ್ ನಲ್ಲಿ ಎಷ್ಟು ಸಿಮ್ ಗಳಿದ್ದವು ಮತ್ತು ಯಾವ ಕಂಪನಿಯದ್ದು ಎಂದು ಗೊತ್ತಿಲ್ಲ. ಕೀ ಪ್ಯಾಡ್ ಮೊಬೈಲ್ ಯಾರಿಗೆ ಸೇರಿದ್ದು ಮತ್ತು ಅದರಲ್ಲಿ ಯಾವ ಸಿಮ್ ಇತ್ತೆಂದು ನನಗೆ ಗೊತ್ತಿಲ್ಲ.

19) Jio company ಯ ಮೊಬೈಲ್ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಯಾವ ಸಿಮ್ ಇತ್ತು ಎಂದು ನನಗೆ ಗೊತ್ತಿಲ್ಲ. Vivo company ಯ ಎಷ್ಟು ಮೊಬೈಲ್ ಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಏಳು ಮೊಬೈಲ್ ಗಳು ಯಾರ್ಯಾರಿಗೆ ಸೇರಿರುತ್ತವೆ ಮತ್ತು ಅವುಗಳಲ್ಲಿ ಯಾವ ಸಿಮ್ ಗಳಿದ್ದವು ಎಂದು ನನಗೆ ಗೊತ್ತಿಲ್ಲ. ಅವು ವೃತ್ತ ನಿರೀಕ್ಷಕರ ಕಚೇರಿಯ ಟೇಬಲ್ ಮೇಲೆ ಇದ್ದ ಫೋನುಗಳು ಎಂದರೆ ಸರಿ. ಸದರಿ ಮೊಬೈಲ್ ಗಳನ್ನುನಮ್ಮ ಸಮಕ್ಷಮ ಯಾವುದೇ ಆರೋಪಿ ವೃತ್ತ ನಿರೀಕ್ಷಕರಿಗೆ ಕೊಟ್ಟಿಲ್ಲ ಎಂದರೆ ಸರಿ. ಮು.ಮಾ.10 ಮತ್ತು 11 ರಂತಹ ರಾಡುಗಳು ಸಾಮಾನ್ಯವಾಗಿ ಬೇರೆ ಕಡೆ ಸಿಗುತ್ತವೆ ಎಂದರೆ ಇರಬಹುದು. ಚೀಟಿಯಲ್ಲಿ ನನ್ನ ಸಹಿಯನ್ನು ಪಡೆದುಕೊಂಡು ಮು.ಮಾ.10 ಮತ್ತು 11 ರ ಮೇಲೆ ಅಂಟಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮು.ಮಾ.10 ಮತ್ತು 11 ರ ಮೇಲೆ ಆ ರೀತಿ ನಾನು ಸಹಿ ಮಾಡಿರುವಂತಹ ಚೀಟಿ ಇರುವುದಿಲ್ಲ. ಕಾರಿನ ಮಾಲೀಕರು ಯಾರೆಂದು ನನ್ನ ಸಮಕ್ಷಮ ವಿಚಾರಣೆ ಮಾಡಿರುವುದಿಲ್ಲ.

20) ಮು.ಮಾ.10 ಮತ್ತು 11 ನ್ನು ಯಾರು ಮತ್ತು ಎಲ್ಲಿಂದ ತಂದಿರುತ್ತಾರೆಂದು ನನಗೆ ಗೊತ್ತಿಲ್ಲ. ಮಹಜರನ್ನು ಟೈಪ್ ಮಾಡಿದ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ನಮ್ಮ ಸಮಕ್ಷಮ ವೃತ್ತ ನಿರೀಕ್ಷಕರಾದ ನವೀನ್ ಕುಮಾರ್ ರವರು ಹೇಳಿ ಮಹಜರನ್ನು ಟೈಪ್ ಮಾಡಿಸಿ ಪ್ರಿಂಟನ್ನು ತೆಗೆದ ನಂತರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ.

21) ನಾಶಪಡಿಸಿದ್ದ ಸಿಮ್ ನಂಬರ್ ಮತ್ತು ಯಾವ ಕಂಪನಿಯದ್ದು ಎಂದು ಗೊತ್ತಿಲ್ಲ. ಸಿಮ್ ನಾಶಪಡಿಸಿರುವ ಬಗ್ಗೆ ಸ್ಥಳದಲ್ಲಿ ಯಾವುದೇ ಕುರುಹುಗಳು ಇರಲಿಲ್ಲ. ಆಗ ಸ್ಥಳೀಯರು ಸೇರಿದ್ದ ಬಗ್ಗೆ ನನಗೆ ನೆನಪಿಲ್ಲ. ಚೌಡೇಶ್ವರಿ ದೇವಸ್ಥಾನದ ಹಿಂಭಾಗಕ್ಕೆ ಹೋಗಿದ್ದೆವು. ಆ ದೇವಸ್ಥಾನದ ಅಕ್ಕಪಕ್ಕ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ನೆನಪಿಲ್ಲ. ದೇವಸ್ಥಾನದಿಂದ ಖಾಲಿ ಜಾಗಕ್ಕೆ ಎಷ್ಟು ದೂರ ಇರುತ್ತದೆ ಎಂದು ನೆನಪಿಲ್ಲ. ಆ ಸ್ಥಳವು ಖಾಲಿ ಜಮೀನಾಗಿರುತ್ತದೆ. ಅದರ ಮಾಲೀಕರು ಯಾರು ಮತ್ತು ಸರ್ವೆ ನಂಬರ್ ಏನೆಂದು ಗೊತ್ತಿಲ್ಲ. ನಿಪಿ.22 ಮತ್ತು 23 ಕ್ಕೆ ಪೋಲೀಸ್ ಠಾಣೆಯಲ್ಲಿ ಸಹಿಗಳನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿಯೇ ಮಹಜರ್ ಗಳ ಪ್ರಿಂಟನ್ನು ತೆಗೆದಿರುತ್ತಾರೆ. ಈ ಬಗ್ಗೆ ಪಂಚನಾಮೆಯಲ್ಲಿ ನಮೂದಿಸಿರುವ ಬಗ್ಗೆ ನನಗೆ ನೆನಪಿಲ್ಲ. ಎಲ್ಲಾ ಪ್ರಕ್ರಿಯೆಗಳು ಆದ ನಂತರ ನಮ್ಮನ್ನು ಕರ್ತವ್ಯದಿಂದ ಬಿಡುಗಡೆ ಮಾಡುತ್ತಿರುವ ಬಗ್ಗೆ ಪೊಲೀಸರು ನನಗೆ ಯಾವುದೇ ಪತ್ರವನ್ನು ಕೊಟ್ಟಿಲ್ಲ. ತಹಸೀಲ್ದಾರ್ ರವರು ನಮಗೆ ಕರೆ ಮಾಡಿದ್ದರು , ಆದ್ದರಿಂದ ಪೋಲೀಸ್ ಠಾಣೆಗೆ ಬಂದಿರುತ್ತೇವೆಂದು ಪಂಚನಾಮೆಯಲ್ಲಿ ನಮೂದಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ವೃತ್ತ ನಿರೀಕ್ಷಕರ ಮಾತನ್ನು ಕೇಳಿಕೊಂಡು ಠಾಣೆಯಲ್ಲಿ ಸೃಷ್ಟಿ ಮಾಡಿಕೊಂಡಿರುವ ಪಂಚನಾಮೆಗಳಿಗೆ ಸಹಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಗಳಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರೆಲ್ಲಾ ಸಹಿಗಳನ್ನು ಮಾಡಿರುತ್ತಾರೆಂದು ನನಗೆ ಗೆತ್ತಿಲ್ಲ. ಆರೋಪಿತರು ಸಂಚು ರೂಪಿಸಿದ ಸ್ಥಳಕ್ಕೆ ಕರೆದುಕೊಂಡು ಹೋದಾಗ ಅಕ್ಕಪಕ್ಕದ ಮನೆಯವರನ್ನಾಗಲೀ, ದೇವಸ್ಥಾನದ ಅರ್ಚಕರನ್ನಾಗಲೀ ವಿಚಾರಣೆ ಮಾಡಿರುವುದಿಲ್ಲ. ಭಾವಚಿತ್ರಗಳನ್ನು ಈಗಿನ ತಂತಜ್ಞಾನವನ್ನು ಉಪಯೋಗಿಸಿ ಠಾಣೆಯಲ್ಲಿ ಸೃಷ್ಟಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 3 ನೇ ಆರೋಪಿತರ ಪರ ಶ್ರೀ.ಎಂ.ಸಿ.ಸಿ. ವಕೀಲರಿಂದ :**

22) ನಿಪಿ.21 ರಿಂದ 23 ರವರೆಗಿನ ಪಂಚನಾಮೆಗಳಲ್ಲಿ ಏನೆಲ್ಲಾ ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ಸಂಚು ರೂಪಿಸಿದ ಸ್ಥಳದ ಸ.ನಂಬರ್ ನನಗೆ ಗೊತ್ತಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ